ಮನೆಗೆ ಮಗುವೊಂದು ಆಗಮಿಸಲಿದೆ ಎಂಬ ಸುದ್ದಿ ಬಹಳ ಖುಷಿ ಕೊಡುತ್ತದೆ. ಅಂತಹ ಸುದ್ದಿಯನ್ನು ಕೇಳಿ ಸಂಭ್ರಮಿಸಲು ಬಂಧು ಬಳಗದವರು ಬಹಳ ಕಾತರದಿಂದ ಇರುತ್ತಾರೆ. ಆದರೆ ಮಗುವಿನ ಆಗಮನವಾದ ಬಳಿಕ ದಿನಗಳು ಹೇಗಿರುತ್ತವೆ? ಪೋಷಕರಿಬ್ಬರು ಜೊತೆಯಾಗಿ ಮಗುವನ್ನು ಪೋಷಿಸಿ ಬೆಳೆಸುವ ಪ್ರಕ್ರಿಯೆಯು ಇಂದು ಹಿಂದಿನಂತೆಯೇ ಇದೆಯೇ?

ವೃತ್ತಿಯಿಂದ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಮೇಘನಾ ಕೆ. ಅವರ ಉತ್ತರ ಕೇಳಿ:

‘ಮದುವೆಯಾಗಿ ಎರಡು ವರ್ಷಗಳ ಬಳಿಕ ಮಗ ಚಿನ್ಮಯ್ ಹುಟ್ಟಿದ. ಅವನು ಹುಟ್ಟುವವರೆಗೆ ನಿರೀಕ್ಷೆಯ ಸಂಭ್ರಮದಲ್ಲಿ ತೇಲಾಡುತ್ತಿದ್ದೆವು. ಆದರೆ ಯಾವಾಗ ಹೆರಿಗೆ ಆಯಿತೋ, ಮಗುವನ್ನು ಬೆಳೆಸುವ ನಿಜವಾದ ಸವಾಲುಗಳು ಏನು ಎಂಬುದು ಒಂದೊಂದೇ ಅರಿವಾಗುತ್ತಾ ಬಂತು...’

ಮೇಘನಾ ಅವರ ಧ್ವನಿಯಲ್ಲಿ ಬೇಸರ ಇಣುಕುತ್ತಿತ್ತು. ಅವರು ತಮ್ಮ ತಾಯ್ತನದ ತವಕ ತಲ್ಲಣಗಳನ್ನು ಹಂಚಿಕೊಳ್ಳಲು ಶುರು ಮಾಡಿದರು:

‘ಮನೆಯಿಂದಲೇ ಕೆಲಸ ಮಾಡುವ ಅವಕಾಶ (ವರ್ಕ್ ಫ್ರಂ ಹೋಮ್) ನನಗೆ ಇದ್ದುದರಿಂದ ಮಗುವನ್ನು ಸಾಕುವುದು ಕಷ್ಟವಾಗಲಿಕ್ಕಿಲ್ಲ ಎಂದು ಭಾವಿಸಿದ್ದೆ. ಹಾಗಾಗಿ, ಮಗು ಒಡಲಿನಲ್ಲಿದ್ದ ದಿನಗಳು ಸಂತಸದಿಂದ ಕೂಡಿದ್ದವು. ಬಾಣಂತನಕ್ಕೆ ಬಂದಿದ್ದ ಅಮ್ಮ ಆರೇಳು ತಿಂಗಳ ನಂತರ ಮರಳಿ ಊರಿಗೆ ಹೋದರು. ಸವಾಲಿನ ದಿನಗಳು ಆರಂಭವಾದುದೇ ಅಲ್ಲಿಂದ. ಮನೆಯ ಕೆಲಸಗಳಿಗೆ ನೆರವಿಗೆ ಬರುತ್ತಿದ್ದ ಆಂಟಿಯೇ ಮಗುವನ್ನು ನೋಡಿಕೊಳ್ಳುತ್ತಿದ್ದರು. ಒಂದು ಕೋಣೆಯಲ್ಲಿ ಮಗು. ಪಕ್ಕದ ಕೊಠಡಿಯಲ್ಲಿ ಲ್ಯಾಪ್‌ಟಾಪ್‌ನಲ್ಲಿ ಲಾಗಿನ್ ಆಗಿ ಕೆಲಸ ಮಾಡುವ ನಾನು! ಮಗು ಅತ್ತಾಗಲೆಲ್ಲಾ ನಾನು ಕೊಠಡಿಯಿಂದ ಹೊರಬಂದು ಮಗುವನ್ನು ಸಮಾಧಾನ ಮಾಡುತ್ತೇನೆ. ಈ ದ್ವಿಪಾತ್ರ ನಿರ್ವಹಣೆಯಿಂದ ಕಚೇರಿಯ ಕೆಲಸಕ್ಕೆ ಕೊಂಚ ತೊಂದರೆಯಾಗಿರುವುದೂ ಉಂಟು. ಆದರೆ ಇದೊಂದು ರೀತಿಯ ಅನಿವಾರ್ಯ ಪರಿಸ್ಥಿತಿ, ಎದುರಿಸಲೇಬೇಕಾದ ಸವಾಲು. ಇನ್ನು ಮಗುವಿಗೆ ಜ್ವರವೋ, ಕೆಮ್ಮೋ ಇದ್ದಾಗ ಕೆಲಸ ನಿರ್ವಹಿಸುವುದು ಎಷ್ಟು ಕಷ್ಟವಾಗಬಹುದು ಎಂದು ನೀವೇ ಊಹಿಸಿ...’

ಮೇಘನಾ ಮಾತು ನಿಲ್ಲಿಸಿ ನಕ್ಕರು. ಅವರ ನಗುವಿನಲ್ಲಿ ವಿಷಾದದ ಛಾಯೆ ಸ್ಪಷ್ಟವಾಗಿತ್ತು. ಅಂದಹಾಗೆ, ಮೇಘನಾ ಅವರ ಪತಿ ಶರತ್‌ಗೆ ಮಗುವಿನ ಆಗಮನ ಸಮಸ್ಯೆಯಾಗಿಲ್ಲವೇ?

ಅಪ್ಪನ ಸ್ಥಾನಕ್ಕೆ ಬಡ್ತಿ ಪಡೆದಿರುವುದು ಶರತ್ ಅವರಿಗೆ ಖುಷಿಯನ್ನೇ ತಂದುಕೊಟ್ಟಿದೆ. ಹೆಂಡತಿಯಷ್ಟು ಸಮಸ್ಯೆ ಅವರಿಗಿಲ್ಲ. ಬೆಳಗ್ಗೆ ಎದ್ದವರು, ದೈನಂದಿನ ವಿಧಿಗಳನ್ನು ಮುಗಿಸಿಕೊಂಡು ಕಚೇರಿಗೆ ಹೋಗುತ್ತಾರೆ. ಕಚೇರಿಯಿಂದ ಬಂದು ಒಂದಿಷ್ಟು ಹೊತ್ತು ಮಗುವಿನ ಜೊತೆಗೆ ಆಟವಾಡಿ ನಿರಾಳರಾಗಿಬಿಡುತ್ತಾರೆ. ಮಗುವಿನ ಆಗಮನದಿಂದ ಶರತ್‌ರ ದೈನಿಕದಲ್ಲಿ ಹೆಚ್ಚಿನ ಏರುಪೇರೇನೂ ಆಗಿಲ್ಲ.

